

ಅನು ಬೆಳ್ಳೆ

## ಕಾಶಮ್ಮನೊಂದಿಗೆ ಇನ್ಸ್‌ಪೆಕ್ಟರ್ ಚರ್ಚೆ

ಅಗಲಕ್ಕೆ ತೆರೆದಂತಿರುವ ಬಾದಾಮಿಯಾಕಾರದ ಕಣ್ಣುಗಳು. ಮುಖದಲ್ಲಿ ಅಗತ್ಯಕ್ಕಿಂತ ಹೆಚ್ಚಾದ ಗಾಂಭೀರ್ಯ. ಮೇಲ್ತುಟಿಗಳನ್ನು ಮುಚ್ಚಿದಂತಿರುವ ದಪ್ಪಗೆ ಬೆಳೆಸಿದ ಮೀಸೆ. ತುಂಬು ಗಲ್ಲಗಳು. ತುಂಬು ಕೂದಲನ್ನು ಒಪ್ಪವಾಗಿ ಬಾಚಿದ ತುಂಬು ಕೂದಲು. ಮೇನಕಾಳ ಮುಖದಲ್ಲಿ ಅತೃಪ್ತಿಯ ನೆರಳು ಮೂಡಿತು. ಸಿಡುಕಿನ ಮಾತುಗಳು ಹೊರಗೆ ಬಂದವು.

'ನನ್ನನ್ನು ಈ ಸ್ಥಿತಿಗೆ ತಳ್ಳಿದವರು ನೀವೇ ಮಿಸ್ಟರ್ ರಾಜಧಾನಿ'

ಮೇನಕಾಳ ಮಾತಿಗೆ ಇನ್ಸ್‌ಪೆಕ್ಟರ್ ರಾಜಧಾನಿಗೆ ನಗು ಬಂತು. ಹಲ್ಲುಗಳು ಕಾಣುವಂತೆ ನಕ್ಕ ಅವನನ್ನು ಇರಿಯುವಂತೆ ನೋಟ ಹರಿಸಿದಳು.

'ಯಾವುದೋ ಗುಂಗಿನಲ್ಲಿ ಒಂದೇ ವೇಗದಲ್ಲಿ ನಡೆಯುತ್ತಿದ್ರಿ. ನಿಮ್ಮನ್ನು ಇಲ್ಲಿ ಕಂಡು ನನಗೆ ಆಶ್ಚರ್ಯವಾಯಿತು. ನೀವೇನೋ ಸಮಸ್ಯೆಯಲ್ಲಿ ಮುಳುಗಿದಂತೆ ಕಂಡಿತು. ನಿಮ್ಮ `ಮೇನಕಾ' ಫಾರ್ಮ್ ಹೌಸ್‌ಗೆ ಬಂದರೆ ನಿಮಗೆ ಇಷ್ಟವಾಗುವುದಿಲ್ಲ ಅಲ್ಲವೆ? ಅದಕ್ಕೆ ನಾನು ನಿಮ್ಮನ್ನು ನೋಡಿ ಇಲ್ಲೇ ಇಳಿದೆ' ಯೂನಿಫಾರಂನಲ್ಲಿಲ್ಲದ ಅಧಿಕಾರಿಯನ್ನು ಅವಳು ತಕ್ಷಣವೇ ಗುರುತಿಸಲಾಗಲಿಲ್ಲ. ಅವನನ್ನು ಗುರುತಿಸಿರುತ್ತಿದ್ದರೆ ತಕ್ಷಣವೇ ಕಾರನ್ನೇರಿ ಹಿಂತಿರುಗುತ್ತಿದ್ದಳು.

'ಯಾವಾಗಲೂ ಯೂನಿಫಾರಂನಲ್ಲಿರೋರು ನೀವು, ಇವತ್ತೇನು ಹೀಗೆ? ಅದಕ್ಕೆ ತಕ್ಷಣ ನಿಮ್ಮನ್ನು ಗುರುತಿಸಲಾಗಲಿಲ್ಲ ನನಗೆ' ಸಿಟ್ಟು ಮಾಯವಾದಂತೆ ಸಮಾಧಾನದ ಮಾತುಗಳನ್ನಾಡಿದಳು.

'ಇವತ್ತು ಅಗತ್ಯವಾಗಿ ಯಾವುದೋ ಕೇಸ್‌ನ ಮೇಲೆ ಕೋರ್ಟ್‌ಗೆ ಹಾಜರಾಗೋದಿದೆ. ನೀವೇನು ಗೊತ್ತು ಗುರಿಯಿಲ್ಲದಂತೆ ನಡುಗೆಯಲ್ಲಿದ್ರಿ?'

ಅವನ ಮುಖ ಗಂಭೀರವಾಗಿರುವುದನ್ನು ಗುರುತಿಸಿದಳು. ಸರಿಯಾದ ಸಮಯಕ್ಕೆ ಇನ್ಸ್‌ಪೆಕ್ಟರ್ ಬಂದಿದ್ದಾನೆ. ಅವನಿಗೆ ಅನಾಮಧೇಯ ಪತ್ರವನ್ನು ಒಪ್ಪಿಸಿಬಿಡಲೇ ಅನಿಸಿತು.

ಅಧಿಕಾರಿ ಅವಳ ಮುಖವನ್ನೇ ಗಮನಿಸಿದ. ಜಿಜ್ಞಾಸೆ ಅವಳ ಮುಖದಲ್ಲಿರುವುದನ್ನು ಗಮನಿಸಿದ.

'ಸರಿ, ನೀವು ಯಾವುದೋ ಅಪಾಯದಲ್ಲಿರುವಿರೆಂದುಕೊಂಡು ನಿಮ್ಮನ್ನು ಗುರುತಿಸಿದವನೇ ಇಳಿದೆ. ಸದ್ಯ ನೀವು ಯಾವುದೇ ಸಮಸ್ಯೆಯಲ್ಲಿಲ್ಲಾಂತ ತಿಳಿಯಿತು. ನಾನಿನ್ನು ಬರ್ತೀನಿ. ಹನ್ನೊಂದು ಗಂಟೆಗೆ ಕೋರ್ಟ್‌ಗೆ ಹಾಜರಾಗಬೇಕು. ಹಾಗೇನಾದರೂ ಸಮಸ್ಯೆಗಳಿದ್ದರೆ ಪೊಲೀಸ್ ಠಾಣೆಗೆ ಬನ್ನಿ' ಅವಳ ಉತ್ತರಕ್ಕೂ ಕಾಯದೆ ಇನ್ಸ್‌ಪೆಕ್ಟರ್ ರಾಜಧಾನಿ ಕಾರನ್ನೇರಿ ಹೊರಟ. ಮೆನಕಾ ಅಸಹಾಯಕಳಂತೆ ಅವನ ಕಾರನ್ನೇ ನೋಡುತ್ತಾ ನಿಂತಳು!

* * *

ಮಧ್ಯಾಹ್ನದ ಬಿರು ಬಿಸಿಲಿಗೆ ಸಿಟಿಯನ್ನೆಲ್ಲಾ ಸುತ್ತು ಹೊಡೆದು ಪೊಲೀಸ್ ಠಾಣೆಯತ್ತ ಕಾರನ್ನು ಓಡಿಸಿದಳು ಮೇನಕಾ. ಸಿಟಿಯಿಂದ ಹೊರಗಿರುವ ಹಳೆಯ ಕಾಲದ ಕಟ್ಟಡ ಅವಳ ಗಮನಕ್ಕೆ ಬಂದಿರಲಿಲ್ಲ. ಇನ್ಸ್‌ಪೆಕ್ಟರ್ ರಾಜಧಾನಿಯನ್ನು ನೋಡಿದ ಮೇಲೆ ಅದನ್ನು ಹುಡುಕುವ ವ್ಯವಧಾನವೂ ಅವಳಲ್ಲಿರಲಿಲ್ಲ. ಅವನ ಬಳಿಯೇ ಸಹಾಯ ಯಾಚಿಸುವ ನಿರ್ಧಾರವನ್ನು ತೆಗೆದುಕೊಂಡವಳು ಸಮಯ